ಪಾಲನೆ ಪೋಷಣೆ

# ಕೆಡುಕಿಗೆ ಮುನ್ನುಡಿ ತಪ್ಪುಗಳ ಸಮರ್ಥನೆ



**ಕೆಟ್ಟ ಮಾತುಗಳನ್ನಾಡುವುದು ಅಥವಾ ಖಳಛಾಯೆಯ ಹೆಸರುಗಳೊಂದಿಗೆ ಸಾಮಾಜಿಕ ಜಾಲತಾಣದಲ್ಲಿ ಗುರ್ತಿಸಿಕೊಳ್ಳುವುದು ಎಳೆಯರ ಪಾಲಿಗೆ ರಂಜನೆ ಎನ್ನಿಸಬಹುದು. ಆದರೆ, ಇಂಥ ಧೋರಣೆ ಮಕ್ಕಳ ಮನಸ್ಸಿನ ಮೇಲೆ ನಿಧಾನವಾಗಿ ನಕಾರಾತ್ಮಕ ಪರಿಣಾಮ ಬೀರಬಹುದು.**

■ ಸ್ವಯಂಪ್ರಭಾ

ಕೆಡುಕಿನ ಕಡೆಗೆ ಬೆನ್ನು ಮಾಡಿ ಬಾಳಬೇಕು ಎಂಬುದು ಹಿರಿಯರ ಆಶಯ. ಒಳ್ಳೆಯ ಸಮಾಜದ ತಳಹದಿಯೇ ಈ ಆಶಯ. ಈ ಹಂಬಲಕ್ಕೆ ದೇಶ ಕಾಲಗಳ ಹಂಗಿಲ್ಲ. ಎಂತಹ ಕೆಟ್ಟ ಮನಸ್ಸಿನ ವ್ಯಕ್ತಿಯೇ ಆಗಲಿ, ತನ್ನ ಮಕ್ಕಳು ಒಳ್ಳೆಯ ದಾರಿಯಲ್ಲಿ ಬಾಳಬೇಕು ಎಂದು ಬಯಸುವುದು ಸಹಜ.

ಆದರೆ, ಕಳೆದ ಒಂದೆರಡು ದಶಕಗಳಲ್ಲಿ ಸಮಾಜದಲ್ಲಿ ನಕಾರಾತ್ಮಕ ಮನೋಭಾವವೊಂದು ರೂಪುಗೊಳ್ಳುತ್ತಿದೆ. 'ತಾನು ಬಹಳ ಕೆಟ್ಟವನು/ಳು' ಎಂದು ಹೇಳಿಕೊಳ್ಳುವುದು ಹೆಮ್ಮೆಯೆಂಬ ಹುಸಿನಂಬಿಕೆಯೊಂದು ಯುವಮನಸ್ಸುಗಳಲ್ಲಿ ಮೂಡುತ್ತಿದೆ. ಇದಕ್ಕೆ ಅತ್ಯುತ್ತಮ ಉದಾಹರಣೆ, ಸಿನಿಮಾಗಳಲ್ಲಿ ಬರುವ ಸಂಭಾಷಣೆಗಳು. 'ತಾನು ಬಹಳ ಕೆಟ್ಟವನು. ನೀನು ಕೆಟ್ಟವನಾದರೆ, ನಾನು ಮತ್ತಷ್ಟು ಕೆಟ್ಟವನು' ಎಂದು ಹೇಳಿಕೊಳ್ಳುವುದೇ ಈ ಹೊತ್ತಿನ ಸಿನಿಮಾಗಳಲ್ಲಿನ ನಾಯಕತ್ವದ ಲಕ್ಷಣವಾಗಿದೆ. ಹಿಂದೆ ಹೀಗಿರಲಿಲ್ಲ. ಈಗ ನಾಯಕ ಹೇಳುವ ಡೈಲಾಗ್‌ಗಳೆಲ್ಲ ಆಗ ಖಳನಾಯಕನ ಸಂಭಾಷಣೆಗಳಾಗಿದ್ದವು.

ಇವೆಲ್ಲ ಸಿನಿಮಾ ನಾಯಕರ ಕಾಲ್ಪನಿಕ ಕಥೆಗಳ ಸಂಗತಿಯೆಂದು ಸಮಾಧಾನ ಮಾಡಿಕೊಳ್ಳಬಹುದು. ಆದರೆ, ವಾಸ್ತವ ಅಷ್ಟು ಸರಳವಾಗಿಲ್ಲ. ಹೊಸತಲೆಮಾರಿನ ಆಕರ್ಷಣೆಯ ವೇದಿಕೆಯಾದ ಇನ್‌ಸ್ಟಾಗ್ರಾಂನಲ್ಲಿ ಒಮ್ಮೆ ಇಣುಕಿನೋಡಿ. ಅಲ್ಲಿ ಮಕ್ಕಳ ಖಾತೆಗಳ ಹೆಸರು ಎಷ್ಟು ಋಣಾತ್ಮಕ ಛಾಯೆಯಿಂದ ಕೂಡಿರುತ್ತವೆ ಎಂದು ನೋಡಿದರೆ ಗಾಬರಿಯೇ ಆಗುತ್ತದೆ. ಬ್ಲಾಕ್ ಮಾಸ್ಟರ್, ಕ್ರೈಮ್ ಚಾರ್ಜ್, ಡೆತ್ ಪಾಥ್, ಬ್ಯಾಡ್ ಪ್ಲೇಯರ್, ನೈಟ್ ಬಗರ್, ಬ್ಲಾಕ್ ಗೇಮರ್ಸ್, ಆಟಿಟ್ಯೂಟ್ ಕಿಲ್ಲರ್, ಕಿಲ್ಲರ್ ಎಕ್ಸ್ ಕ್ಯಾಪ್ಟನ್... ಇಂಥ ಹೆಸರುಗಳು ಏನನ್ನು ಸೂಚಿಸುತ್ತವೆ. ನಕಾರಾತ್ಮಕ ಸಂಗತಿಗಳ ವೈಭವೀಕರಣ ಎಂದು ತೋರುವುದಿಲ್ಲವೆ?

ಇನ್‌ಸ್ಟಾಗ್ರಾಂನಲ್ಲಿ ತಮ್ಮ ಬಳಕೆಯ ಹೆಸರನ್ನು (ಯೂಸರ್ ನೇಮ್) ಆಗಾಗ ಬದಲಿಸಿಕೊಳ್ಳುವ ಅವಕಾಶವಿದೆ. 'ಕಿಲ್ಲರ್ ಎಕ್ಸ್ ಕ್ಯಾಪ್ಟನ್' ಒಂದಷ್ಟು ದಿನ ತನ್ನ ಹೆಸರನ್ನು 'ಕೊರೊನಾ ವೈರಸ್' ಎಂದು ಹಾಕಿಕೊಂಡಿದ್ದನ್ನೂ ನೋಡಿದೆ.

ಕೆಡುಕು ಎನ್ನುವುದು ಮುಕ್ತ ಪ್ರದೇಶದ ವಿಹಾರಿ. ಆದರೆ ಒಳಿತು ಹಾಗಲ್ಲ. ಕೆಡುಕಿನ ಮುಕ್ತತೆ ಹೆಚ್ಚಿದಷ್ಟೂ ಒಳಿತಿನ ಗಾತ್ರ ಕಿರಿದಾಗುತ್ತಾ ಹೋಗುತ್ತದೆ. ಹಾಗಾಗಿ ಕೆಡುಕಿನ ನಿಯಂತ್ರಣವು ಎಷ್ಟು ಬಿಗುವಾಗುವುದೊ, ಒಳಿತೆಂಬುದು ಅಷ್ಟು ಸರಾಗವಾಗಿ ಉಸಿರಾಡಬಲ್ಲದು. ಹಾಗಿದ್ದರೆ ಮಕ್ಕಳು ಒಳಿತಿನ ದಾರಿಯನ್ನು ಆಯ್ಕೆ ಮಾಡಿಕೊಳ್ಳಬೇಕಾದರೆ, ಕೆಡುಕಿನ ನಿಯಂತ್ರಣವನ್ನು ಯಾರು ಮಾಡಬೇಕು? ಅದು ಹಿರಿಯರದೇ ಜವಾಬ್ದಾರಿ.

ಕೆಡುಕನ್ನು ಸಮರ್ಥಿಸುವ ಧೋರಣೆ, ಸಂಭಾಷಣೆಗಳು ಇರುವ ಸಿನಿಮಾಗಳನ್ನೋ ಅಥವಾ ಕೆಡುಕಿಗೆ ಪ್ರೇರಕವಾಗುವ ಶೈಲಿಯಲ್ಲಿರುವ ಸುದ್ದಿಗಳನ್ನೋ ಘಟನೆಗಳನ್ನೂ ಗಮನಿಸುವಾಗ ಇದೇ ಯೋಚನೆ ಮನಸ್ಸಿಗೆ ಬರುತ್ತದೆ. ಇವೆಲ್ಲಾ ಮಕ್ಕಳ ಮನಸ್ಸಿನ ಮೇಲೆ ಎಂಥ ಪರಿಣಾಮ ಸುದ್ದಿಯನ್ನು ವೈಭವೀಕರಿಸುವ ಭರದಲ್ಲಿ, ಅದರ ಪ್ರತಿಬಿಂಬ ಮಕ್ಕಳ ಮನಸ್ಸಿನ ಮೇಲೆ ಯಾವ ಪರಿಣಾಮ ಬೀರಬಹುದು ಎಂದು ಮನಸ್ಸು ಅಳುಕುತ್ತದೆ.

ಸಮಾಜದಲ್ಲಿ ಇರಬೇಕಾದ ಎಲ್ಲ ಬಗೆಯ ದಾಕ್ಷಿಣ್ಯ, ಸಾಮಾಜಿಕ ಜವಾಬ್ದಾರಿಗಳಿಗಿಂತಲೂ ಮುಖ್ಯವಾದುದು 'ಮಕ್ಕಳು ಏನಂದುಕೊಳ್ಳುತ್ತಾರೋ' ಏನೋ ಎಂಬ ಅಳುಕು. ಎಲ್ಲ ಪೋಷಕರಲ್ಲಿಯೂ ಈ ಅಳುಕು ಇದ್ದಲ್ಲಿ ಮಕ್ಕಳ ಕಣ್ಣಿಗೆ ಕೆಡುಕು ರಾಚುವಂತೆ ಗೋಚರಿಸಲಾರದು. ಪರೋಕ್ಷವಾಗಿ ಅದು ಅವರ ಸಾಮಾಜಿಕ ಜವಾಬ್ದಾರಿಯೆಂಬ ಅಳುಕನ್ನು ಮೂಡಿಸುವುದು. ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ, 'ಸಾಮಾಜಿಕ ಲಜ್ಜೆ'ಯನ್ನು ಮೂಡಿಸಲು ಸಹಾಯವಾಗುತ್ತದೆ. ಹಾಗಿದ್ದಾಗ, ನಮ್ಮ ಮಕ್ಕಳು ಯೂಸರ್ ನೇಮ್ ಅನ್ನು 'ಕ್ರೈಮ್ ಮಾಸ್ಟರ್' ಎಂದು ಹಾಕಿಕೊಳ್ಳಲು ಖಂಡಿತವಾಗಿ ಮುಜುಗರ ಪಡುತ್ತಾರೆ.

ಇನ್‌ಸ್ಟಾಗ್ರಾಂನಲ್ಲಿ ಇರುವ ಬಹುತೇಕ ಮಕ್ಕಳ ಖಾತೆಗಳು, ಯುವಜನತೆಯ ಖಾತೆಗಳು ಇಂತಹ ಹೆಸರುಗಳ ಮೂಲಕವೇ ಗುರುತಿಸಿಕೊಂಡಿರುತ್ತವೆ. ಖಾತೆಯ ಹೆಸರನ್ನು ಹೀಗೆ ಋಣಾತ್ಮಕವಾಗಿ ಹೊಂದಿರುವ ಮಕ್ಕಳು ಕೆಟ್ಟವರೆಂದೇನೂ ಅಲ್ಲ. ಆದರೆ ಮಕ್ಕಳ ಅಂತರಂಗದಲ್ಲಿ ಇಂತಹುದೊಂದು ಧೋರಣೆಯು ನಿಧಾನವಾಗಿ ರೂಪುಗೊಳ್ಳುವುದು ಒಳಿತಿನ ಲಕ್ಷಣವಲ್ಲ.

ಕೆಟ್ಟ ಸಂಗತಿಗಳಿಗೆ ಮನಸ್ಸು ಒಗ್ಗತೊಡಗಿದರೆ, ನಂತರದಲ್ಲಿ ಆ ಧೋರಣೆಯನ್ನು ಬದಲಾಯಿಸುವುದು ಸುಲಭದ ಮಾತಲ್ಲ. ಸಾಹಿತ್ಯ, ಸಿನಿಮಾ, ಓದು, ತಮ್ಮ ಸುತ್ತಮುತ್ತ ಇರುವ ದೊಡ್ಡವರ (ಹಿರಿಯರ) ನಡವಳಿಕೆಗಳು, ಯಾವ ರೀತಿಯ ಯಶಸ್ಸನ್ನು ಸಮಾಜ ಮನ್ನಿಸುತ್ತದೆ ಎಂಬ ಬಗ್ಗೆ ಮಕ್ಕಳ ಗಮನಿಸುವಿಕೆ, ಇವೆಲ್ಲವೂ ಮಕ್ಕಳ ಮನಸ್ಸನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಪೋಷಕರು ಮಕ್ಕಳೆದುರು ಕೆಡುಕಿನ, ಸಿನಿಕತೆಯ ಸಮರ್ಥನೆ ಮಾಡದೇ ಇರುವುದರಿಂದಲೂ ಎಳೆಯ ಮನಸುಗಳು ತಿಳಿಯಾಗಿಯೇ ಉಳಿಯಲು ಸಹಕಾರಿ.

ಪ್ರತಿಕ್ರಿಯಿಸಿ: feedback@sudha.co.in